ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (238) 94
ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
ಉತ್ತರಿಸುವವರು : ಶ್ರೀ ಪಿ.ಎಂ. ನರೇಂದ್ರಸ್ವಾಮಿ
(ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಪ್ರಶ್ನೆ	ಉತ್ತರ
ಅ) ಭಾಗ್ಯಲಕ್ಷ್ಮಿ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೆ ತರಲಾಗಿದೆ. ಇದರ ಮುಖ್ಯಾಂಶಗಳೇನು? ಇದುವರೆವಿಗೂ ಎಷ್ಟು ಜನ ಹೆಣ್ಣು ಮಕ್ಕಳಿಗೆ ಇದರ ಪ್ರಯೋಜನ ದೊರೆತಿದೆ. ಆಯವ್ಯಯದಲ್ಲಿ ಇಲ್ಲಿಯವರೆವಿಗೆ ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣವೆಷ್ಟು (ವಿವರ ನೀಡುವುದು)	ಭಾಗ್ಯಲಕ್ಷ್ಮಿ ಯೋಜನೆಯನ್ನು 1-4-2006 ರಿಂದ ಚಾಲನೆ ತರಲಾಗಿರುತ್ತದೆ. 1-4-2006 ರಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ 2 ಹೆಣ್ಣು ಮಕ್ಕಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುವುದು. ಹೆಣ್ಣು ಮಗುವಿನ ಹೆಸರಿನಲ್ಲಿ ರೂ. 10.000/- ಗಳನ್ನು ಆಯ್ಕೆಯಾದ ಹಣಕಾಸು ಸಂಸ್ಥೆಯಲ್ಲಿ ಠೇವಣಿ ಹೂಡಲಾಗುವುದು. ಠೇವಣಿ ಹಣವನ್ನು ಬಡ್ಡಿ ಸಮೇತವಾಗಿ ಫಲಾನುಭವಿಗಳಿಗೆ 18 ವರ್ಷಗಳು ಪೂರ್ಣಗೊಂಡ ನಂತರ ಮೊದಲನೇ ಮಗುವಿಗೆ ರೂ. 34.165 ಹಾಗೂ ಎರಡನೇ ಮಗುವಿಗೆ ರೂ. 40.918/- ಮೊತ್ತವನ್ನು ದೊರಕಿಸಿ ಕೊಡಲಾಗುತ್ತದೆ. ಹೆಣ್ಣು ಮಗು ವಿದ್ಯಾಭ್ಯಾಸವನ್ನು ಮುಂದುವರೆಸಿದಂತೆ ವಿದ್ಯಾರ್ಥಿ ವೇತನ. ವೈದ್ಯಕೀಯ ವಿಮೆ ಹಾಗೂ ಪೋಷಕರಿಗೆ ಜೀವ ವಿಮಾ ಸೌಲಭ್ಯ ನೀಡಲಾಗುವುದು. 2006-07ರಲ್ಲಿ 2.22.248 ಮಕ್ಕಳು ಈ ಸೌಲಭ್ಯ ಪಡೆದಿದ್ದು. ರೂ. 236.74 ಕೋಟಿ ವೆಚ್ಚ ಮಾಡಲಾಗಿದೆ. 2007-08ರಲ್ಲಿ 1.06.410 ಮಕ್ಕಳಿಗೆ ಸೌಲಭ್ಯ ಕಲ್ಪಿಸಲಾಗಿದ್ದು. ರೂ. 106.410 ಕೋಟಿ ವೆಚ್ಚ ಮಾಡಲಾಗಿದೆ.
ಆ) ಈ ಯೋಜನೆಯಡಿಯಲ್ಲಿ. ನೀಡಲಾಗುತ್ತಿರುವ ಹಣದ ಮೊತ್ತವನ್ನು ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ. ಹಾಗಿದ್ದಲ್ಲಿ. ಎಷ್ಟು ಪ್ರಮಾಣದಲ್ಲಿ ಮೊತ್ತ ಹೆಚ್ಚಿಸಲಾಗಿದೆ.	ಈ ಯೋಜನೆಗೆ ನೀಡುತ್ತಿದ್ದ ಕೊಡುಗೆಯನ್ನು ದ್ವಿಗುಣಗೊಳಿಸಲಿದೆ ಹಾಗೂ ಫಲಾನುಭವಿ ಹೆಣ್ಣು ಮಗುವು ತನ್ನ 18ನೇ ವಯಸ್ಸಿಗೆ ಬಂದಾಗ ಒಂದು ಲಕ್ಷ ರೂ.ಗಳನ್ನು ಪಡೆಯಲಿದೆ ಎಂದು ಆಯವ್ಯಯ ಭಾಷಣದಲ್ಲಿ ಪ್ರಕಟಿಸಲಾಗಿದೆ.
ಇ) ಈ ಯೋಜನೆಯ ಬಗ್ಗೆ ಮಾಹಿತಿ ಸಂಗ್ರಹ ಸಲುವಾಗಿ ವೆಬ್‌ಸೈಟ್‌ನ್ನು ಆರಂಭ ಮಾಡಿರುವುದು ನಿಜವೇ?	ಈ ಯೋಜನೆ ಮಾಹಿತಿ ಸಂಗ್ರಹ ಮಾಡಲು ವೆಬ್‌ಸೈಟ್ ಆರಂಭಿಸುವ ಸಾಫ್ಟ್‌ವೇರ್ ತಯಾರಿ ಪ್ರಕ್ರಿಯೆಯಲ್ಲಿದೆ.
ಈ) ಹಾಗಿದ್ದಲ್ಲಿ. ಯಾವಾಗ ಈ ವೆಬ್‌ಸೈಟ್‌ನ್ನು ಪ್ರಾರಂಭಿಸಲಾಯಿತು. ಅಂದಿನಿಂದ ಇಂದಿನವರೆಗೆ ಎಷ್ಟು	ಪ್ರಥಮ ಹಂತದ ಮಾಹಿತಿಯನ್ನು ಸಂಗ್ರಹಿಸುವ ಬಗ್ಗೆ ಯಲಹಂಕ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಿದ್ದು. ಈಗಾಗಲೇ 125

ಮಾಹಿತಿಯನ್ನು ಸಂಗ್ರಹಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ನೀಡಲಾಗುವುದು)	ಮಕ್ಕಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ.
ಊ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಮೀಸಲಿಡಲಾಗಿದೆ? (ವಿವರ ನೀಡುವುದು)	ರೂ. 266.65 ಕೋಟಿ.